ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಅಲ್ಲಿನ ಅಧಿಕಾರಿಗಳು ಸರ್ಕಾರದಿಂದ ಬರುತ್ತಿರುವ ಸಂಬಳವನ್ನು ತಿಂದುಕೊಂಡು ಕಾಲ ಕಳೆಯುತ್ತಿದ್ದಾರೆ ಏನು ಕೆಲಸ ಮಾಡುತ್ತಿಲ್ಲ ಎನ್ನುವುದು ಸತ್ಯಕ್ಕೆ ದೂರವಾದಂಥ ಆರೋಪ. ಇಲ್ಲಿ ಡೆಕನ್ ತಳಿಯ ಕುರಿಗಳು ಹಾಗು ಆಸ್ಟ್ರೇಲಿಯಾ ದೇಶದ ಕಾರಿಡಾಲ್ ಕುರಿಗಳನ್ನು ಸಾಕಿ ಅವುಗಳಿಂದ ಮಿಶ್ರ ತಳಿಯ ಕುರಿಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ ಪ್ರತಿ ವರ್ಷವೂ ಇಲ್ಲಿ ೬೦೦ ಟಗರುಗಳನ್ನು ಉತ್ಪಾಶ್ರಿ ಮಾಡಲಾಗುತ್ತಿದೆ. ಈ ಟಗರುಗಳನ್ನು ಅವರ ತಾಲ್ಲೂಕು ಒಂದಕ್ಕೇ ಅಲ್ಲದೇ ಇತರೇ ತಾಲ್ಲೂಕು ರೈತರಿಗೂ ಕೊಡಲಾಗುತ್ತಿದೆ. ಅಧಿಕಾರಿಗಳು ಬರೀ ಸಂಬಳ ತಿಂದುಕೊಂಡು ಕುಳಿತಿದ್ದಾರೆ ಎನ್ನುವುದು ಸರಿಯಾದುದಲ್ಲ. ಇದು ಸತ್ಯಕ್ಕೆ ದೂರವಾದಂಥ ಆರೋಪ.

ಶ್ರೀ ತಿಪ್ಪೇಸ್ವಾಮಿ.—ಮಾನ್ಯ ಮಂತ್ರಿಮಹೋದಯರು, ಅಲ್ಲಿರುವ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ನಾನು ಮಂತ್ರಿಯವರಲ್ಲಿ ಕೇಳುವುದೇನೆಂದರೆ, ನಮ್ಮ ತಾಲ್ಲೂಕಿಗೆ ಮಿಶ್ರ ತಳಿಯ ಟಗರುಗಳನ್ನು ಇವರು ಕೊಟ್ಟಿರುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಎಷ್ಟು ಜನ ರೈತರಿಗೆ ಅನುಕೂಲವಾಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಆ ಫಾರಂನಲ್ಲಿ ೩,೪೧೭ ಕುರಿಗಳು ಇವೆ. ವರ್ಷಕ್ಕೆ ಸುಮಾರು ೬ ನೂರು ಮಿಶ್ರ ತಳಿ ಟಗರುಗಳು ಉತ್ಪತ್ತಿಯಾಗುತ್ತಿವೆ. ಈ ಟಗರುಗಳನ್ನು ಮಾನ್ಯ ಸದಸ್ಯರ ತಾಲ್ಲೂಕಿನ ರೈತರಿಗೂ ಕೊಟ್ಟಿದ್ದೇವೆ. ಇತರೇ ತಾಲ್ಲೂಕಿನ ರೈತರುಗಳು ಸಹ ತೆಗೆದುಕೊಂಡು ಹೋಗುತ್ತಾರೆ. ಮಾನ್ಯ ಸದಸ್ಯರು ಅವರ ತಾಲ್ಲೂಕಿನ ರೈತರಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಅವರ ತಾಲ್ಲೂಕಿನ ರೈತರಿಗೂ ಟಗರುಗಳನ್ನು ಕೊಟ್ಟಿದ್ದೇವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ, ರಘುಪತಿ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸದನದ ಮುಂದೆ ಇಡುತ್ತೇನೆ.

ಕಡೂರು ತಾಲ್ಲೂಕಿನ ಸರಕಾರಿ ಕಿರಿಯ ಕಾಲೇಜಿಗೆ ಪ್ರಾಂಶುಪಾಲರನ್ನು ನೇಮಿಸುವ ಬಗ್ಗೆ

೧೧೯. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಡೂರು ತಾಲ್ಲೂಕಿನಲ್ಲಿ ಸರ್ಕಾರಿ ಕಿರಿಯ ಕಾಲೇಜುಗಳೆಲ್ಲಿ ಮೂರು ನಾಲ್ಕು ವರ್ಷಗಳಿಂದ ಪ್ರಾಂಶುಪಾಲರು ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿಯೆ ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಎಷ್ಟು ದಿವಸಗಳಲ್ಲಿ ಭರ್ತಿ ಮಾಡಲಾಗುವುದು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).

ಅ) ಬಂದಿದೆ.

ಆ) ಈಗಾಗಲೇ ತುಂಬಲಾಗಿದೆ.

ಏಳನೇ ತರಗತಿ ಪಬ್ಲಿಕ್ ಪರೀಕ್ಷೆಯನ್ನು ಜಾರಿಗೆ ತರುವ ಬಗ್ಗೆ

೭೪೩. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಏಳನೆಯ ತರಗತಿಯ ಪರೀಕ್ಷೆಯನ್ನು ಸಾರ್ವತ್ರಿಕ ಪರೀಕ್ಷೆಯನ್ನಾಗಿ ನಡೆಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಸದರೀ ಪರೀಕ್ಷೆಗೆ ಸರಿ ಸುಮಾರಾಗಿ ಪ್ರವೇಶ ಹೊಂದುವ ವಿದ್ಯಾರ್ಥಿನಗಳ ಸಂಖ್ಯೆ ಎಷ್ಟು ?